**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್.ಎ.ಪಿ. ವಕೀಲರಿಂದಃ-**

ನಾನು ಹಾಜರು ಪಡಿಸಿದ ದಾಖಲೆಗಳಲ್ಲಿ ದಿನಾಂಕ 07-01-2011 ರ ಮಾರಾಟ ಪತ್ರದ ದೃಢಿಕೃತ ನಕಲನ್ನು ನಿಪಿ-4 ಎಂದು, ದಿನಾಂಕ 11-01-2011 ರ ಮಾರಾಟ ಪತ್ರದ ದೃಢಿಕೃತ ನಕಲನ್ನು ನಿಪಿ-5 ಎಂದು ಮತ್ತು ಕ್ರಯದ ಕರಾರು ಪತ್ರದ ದೃಢಿಕೃತ ನಕಲನ್ನು ನಿಪಿ-6 ಎಂದು ಗುರುತಿಸಲಾಯಿತು.

ಸಂಗಮ್ಮರವರು ಸದರಿ ಕ್ರಯಾ ಪತ್ರಗಳನ್ನು ಗುಂಡಮ್ಮ ಮತ್ತು ಸೋಮಶೇಖರರವರಿಗೆ ಬರೆದುಕೊಟ್ಟಿದ್ದಾರೆ. ಗುಂಡಮ್ಮರವರು ಈಗ ಮೃತಪಟ್ಟಿದ್ದಾರೆ. 2 ರಿಂದ 7 ನೇ ಪ್ರತಿವಾದಿಯರು ಗುಂಡಮ್ಮರವರು ಮಕ್ಕಳು. ನಮಗೆ ಬರಬೇಕಾದ ಜಮೀನು ಗುಂಡಮ್ಮ ಮತ್ತು ರಾಜಶೇಖರವರಿಗೆ ನೋಂದಣಿ ಮಾಡಿ ಕೊಟ್ಟಿರುವ ಕಾರಣ ಈ ದಾವೆಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**